ಅರ್ಹತಾ ದಿನಾಂಕ: 01–01–1988 ರಿಂದ 01–08–2012ರ ವರೆಗಿನ ಅಂತ್ಯಕ್ಕೆ ಇರುವಂತೆ ದಿನಾಂಕ: 26–12–2013 ರಂದು ಅಂತಿಮಗೊಳಿಸಿರುವ ಹಾಗೂ ಅರ್ಹತಾ ದಿನಾಂಕ: 01–01–2015ಕ್ಕೆ ಇರುವಂತೆ ದಿನಾಂಕ: 09–09–2015 ರಂದು ಅಂತಿಮಗೊಳಿಸಿರುವ ಪ್ರಥಮ ದರ್ಜೆ ಸಹಾಯಕರ ವೃಂದದ ಸೇವಾ ಜೇಷ್ಠತಾ ಪಟ್ಟಿಯನ್ನು ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ: 45646/2015 ಹಾಗೂ ಇತರೇ ಪ್ರಕರಣಗಳಲ್ಲಿನ ದಿನಾಂಕ: 28–07–2023ರ ಆದೇಶದಂತೆ ಪರಿಗಣಿಸಿ, ದಿನಾಂಕ: 08–11–2023ರಂದು ಹೊರಡಿಸಿರುವ ಪ್ರಥಮ ದರ್ಜೆ ಸಹಾಯಕರ ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಗೆ ಬಂದಿರುವ ಆಕ್ಷೇಪಣೆಗಳ ವಿವರಗಳು.

| ಕ್ರ.ಸಂ. | ಹೆಸರು ಮತ್ತು ಪದನಾಮ | ಆಕ್ಷೇಪಣೆ ಸಲ್ಲಿಸಿದ ದಿನಾಂಕ | ಆಕ್ಷೇಪಣೆಗಳ ಸಂಕ್ಷಿಪ್ತ ವಿವರ | ಆಕ್ಷೇಪಣೆ ಬಗ್ಗೆ ಕೈಗೊಂಡ ನಿರ್ಣಯ / ತೀರ್ಮಾನ |
|---|---|---|---|---|
| 1. | 1) ಚಂದ್ರಪ್ರಕಾಶ್.ಎಂ<br>ವ್ಯವಸ್ಥಾಪಕರು<br>ಮುಖ್ಯಲೆಕ್ಕಾಧಿಕಾರಿ ಕಛೇರಿ<br><br>2) ವಿ.ಟಿ.ಮಹದೇವ<br>ವ್ಯವಸ್ಥಾಪಕರು<br>ಮುಖ್ಯ ಅಭಿಯಂತರರು<br>ಬೃಹತ್ ನೀರುಗಾಲುವೆ<br><br>3) ಹೆಚ್.ದೇವರಾಜ್<br>ವ್ಯವಸ್ಥಾಪಕರು<br>ಕಾ.ಪ.ಅ. ಪದ್ಮನಾಭನಗರ<br><br>4) ಎ.ಎನ್.ಪ್ರಸಾದ್<br>ವ್ಯವಸ್ಥಾಪಕರು<br>ಜಂಟಿ ಆಯುಕ್ತರು (ಪಶ್ಚಿಮ) | 20–11–2023 | ಈ ಕೆಳಕಂಡಂತೆ ಸಹಿ ಮಾಡಿರುವ ಚಂದ್ರಪ್ರಕಾಶ್.ಎಂ ಆದ ನಾನು ಪ್ರಥಮ ದರ್ಜೆ ಸಹಾಯಕರ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಈ ಕೆಳಕಂಡಂತೆ ಆಕ್ಷೇಪಣೆ ಸಲ್ಲಿಸುತ್ತಿದ್ದೇನೆ<br><br>ಉಲ್ಲೇಖಿತದಂತೆ ಹೊರಡಿಸಿರುವ ಪ್ರಥಮ ದರ್ಜೆ ಸಹಾಯಕರ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ನನ್ನ ಕ್ರಮ ಸಂಖ್ಯೆ:667 ರಲ್ಲಿ ನಮೂದಿಸಿದ್ದು, ವಾಸ್ತವವಾಗಿ ನನಗೆ ಸೇವಾ ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ:509 ರಲ್ಲಿ ನಮೂದಾಗಬೇಕಾಗಿರುತ್ತದೆ. ಏಕೆಂದರೆ, ನಾನು ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಿಂದ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ದಿನಾಂಕ:10–05–2007 ರಲ್ಲಿ ಮುಂಬಡ್ತಿ ಹೊಂದಿರುತ್ತೇನೆ.<br><br>ಉಲ್ಲೇಖಿತದ ಪ್ರಥಮ ದರ್ಜೆ ಸಹಾಯಕರ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ:509 ರಿಂದ 519 ರವರೆಗಿನ ನೌಕರರುಗಳು ವಾಸ್ತವವಾಗಿ ಸಮುದಾಯ ಸಂಘಟಕರಾಗಿದ್ದು, ಇವರುಗಳು ಎಸ್.ಜೆ.ಎಸ್.ಆರ್.ವೈ ಯೋಜನೆ ಅಡಿ ತಾತ್ಕಾಲಿಕವಾಗಿ ನೇಮಕಾತಿಗೊಂಡು, ನಂತರದಲ್ಲಿ ದಿನಾಂಕ:28–10–2005 ರಂದು ಸದರಿಯವರ ಸೇವೆಯನ್ನು ಖಾಯಂಗೊಳಿಸಲಾಗಿರುತ್ತದೆ. ಈ ಸಂಧರ್ಭದಲ್ಲಿ ಸದರಿಯವರುಗಳ ವೇತನ ಶ್ರೇಣಿ ರೂ.3000–5450 ಆಗಿದ್ದು, ಈ ವೇತನ ಶ್ರೇಣಿಯು ದ್ವಿತೀಯ ದರ್ಜೆ ಸಹಾಯಕರ ವೇತನ ಶ್ರೇಣಿಯ ಸಮಾನಾಂತರವಾಗಿರುತ್ತದೆ.<br><br>ನಂತರದಲ್ಲಿ, 5ನೇ ರಾಜ್ಯ ವೇತನ ಆಯೋಗದ ಅಂತಿಮ ವರದಿಯಲ್ಲಿನ ಶಿಫಾರಸ್ಸಿನ ಅನ್ವಯ ಕೆಲವೊಂದು ಹುದ್ದೆಗಳಿಗೆ ಹೆಚ್ಚಿನ ವೇತನ ಶ್ರೇಣಿಯನ್ನು ನೀಡಲು ಶಿಫಾರಸ್ಸು ಮಾಡಿದ್ದು, ಅದರಂತೆ ಸಮುದಾಯ ಸಂಘಟಕರ ವೇತನ ಶ್ರೇಣಿಯನ್ನು 5800–10500 (5ನೇ ವೇತನ ಆಯೋಗದ ಅನ್ವಯ ದ್ವಿತೀಯ ದರ್ಜೆ ಸಹಾಯಕರ ವೇತನ ಶ್ರೇಣಿಗಳಿಂದ ರೂ.7275–13350 ಗಳಿಗೆ ಪರಿಷ್ಕೃತಗೊಳಿಸಿ (ಪ್ರಥಮ ದರ್ಜೆ ಸಹಾಯಕರ ವೇತನ ಶ್ರೇಣಿ) ಆದೇಶ ಹೊರಡಿಸಿದ್ದು, ಪರಿಷ್ಕೃತ ವೇತನ ಶ್ರೇಣಿಯನ್ನು ದಿನಾಂಕ:03–06–2010 ರಿಂದ ಜಾರಿಗೆ ಬರುವಂತೆ ನಿಗಧಿಪಡಿಸಿ ಸರ್ಕಾರವು ಆದೇಶ ಹೊರಡಿಸಿರುತ್ತದೆ. ಅದರಂತೆ ಸದರಿಯವರುಗಳನ್ನು ಪ್ರಥಮ ದರ್ಜೆ ಸಹಾಯಕರ | ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿ, ಮಾನ್ಯ ನ್ಯಾಯಾಲಯದ ಅಂತಿಮ ಆದೇಶ ಬಾರದಿರುವ ಹಿನ್ನೆಲೆಯಲ್ಲಿ ಆಕ್ಷೇಪಣೆಗಳನ್ನು ಸದ್ಯಕ್ಕೆ ಪರಿಗಣಿಸಲು ಬರುವುದಿಲ್ಲವೆಂದು ತೀರ್ಮಾನಿಸಿ ವಿಲೇವಾರಿ ಮಾಡಲಾಯಿತು. |

| | | | | |
|---|---|---|---|---|
| | | | ಹುದ್ದೆಯಲ್ಲಿ ದಿನಾಂಕ:03–06–2010 ರಿಂದ ಜಾರಿಗೆ ಬರುವಂತೆ ಪ್ರಥಮ ದರ್ಜೆ ಸಹಾಯಕರ ಹುದ್ದೆಯಲ್ಲಿ ಸೇವಾ ಜೇಷ್ಠತೆಯನ್ನು ನಿಗಧಿಪಡಿಸಿರುವುದು ಸಮಂಜಸವಾಗಿರುವುದಿಲ್ಲ.<br><br>ಮುಂದುವರೆದು, ದಿನಾಂಕ:31–08–2015 ರಂದು ಮಾನ್ಯ ಆಡಳಿತಗಾರರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿಯೂ ಸಹ "ಸಮುದಾಯ ಸಂಘಟಕರು ದ್ವಿತೀಯ ದರ್ಜೆ ಸಹಾಯಕ ವೃಂದದ ವೇತನ ಶ್ರೇಣಿಯಲ್ಲಿ ಇದ್ದುದ್ದರಿಂದ ದಿನಾಂಕ:01–07–2007 ರಿಂದ ದಿನಾಂಕ:03–06–2010 ರವರೆಗೆ ಅವರನ್ನು ದ್ವಿತೀಯ ದರ್ಜೆ ಸಹಾಯಕ ವೃಂದ ಹಾಗೂ ವೇತನ ಶ್ರೇಣಿಯ ಜೇಷ್ಠತೆಯಲ್ಲಿ ಪರಿಗಣಿಸುವುದು ಸೂಕ್ತ, ದಿನಾಂಕ:03–06–2010 ರಿಂದ ಅವರನ್ನು ಪರಿಷ್ಕೃತ ವೇತನ ಶ್ರೇಣಿಯಾದ ಪ್ರಥಮ ದರ್ಜೆ ಸಹಾಯಕ ಶ್ರೇಣಿಯ ಜೇಷ್ಠತೆಯಲ್ಲಿ ಪರಿಗಣಿಸುವುದು. 2010 ರ ಸರ್ಕಾರದ ಆದೇಶದಂತೆ ಸದರಿ ನೌಕರರುಗಳ ಪರಿಷ್ಕೃತ ವೇತನವು ತಕ್ಷಣದಿಂದ ಜಾರಿಗೆ ಬರುವಂತೆ (ದಿನಾಂಕ:03–06–2010 ರಿಂದ) ಎಂದು ಆದೇಶಿಸಿರುವುದರಿಂದ ಅಂದರೆ ಹಿಂದಿನ ದಿನಾಂಕವಾದ 01–01–2007 ರಿಂದ ಅನ್ವಯವಾಗುವುದಿಲ್ಲ. ವಿಲೀನಾತಿಗೊಂಡ ದಿನಾಂಕದಿಂದಲೇ ಪರಿಷ್ಕೃತ ವೇತನ ಶ್ರೇಣಿಯ ಆಧಾರದ ಮೇಲೆ ಸೇವಾ ಜೇಷ್ಠತೆಯನ್ನು ನಿಗಧಿಪಡಿಸುವುದು ನಿಯಮಾಬಾಹಿರವಾಗಿರುತ್ತದೆ. ಎಂದು ತೀರ್ಮಾನಿಸಲಾಗಿರುತ್ತದೆ.<br><br>ಅದರಂತೆ, ಸದರಿಯವರುಗಳನ್ನು ಪ್ರಥಮ ದರ್ಜೆ ಸಹಾಯಕರ ಸೇವಾ ಜೇಷ್ಠತೆಯಲ್ಲಿ ಅವರುಗಳು ದಿನಗೂಲಿಯಿಂದ ಖಾಯಂ ಆದ ದಿನಾಂಕದಿಂದ ನಿಗಧಿಪಡಿಸಿರುವುದು ಸರಿಯಾದ ಕ್ರಮವಾಗಿರುವದಿಲ್ಲ.<br>3) ಉಲ್ಲೇಖಿತದ ಪ್ರಥಮ ದರ್ಜೆ ಸಹಾಯಕರ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ಕ್ರಮ ಸಂಖ್ಯೆ:525,526 ಮತ್ತು 527 ರವರುಗಳು ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಹೊಂದಿದ್ದು, ಸದರಿಯವರುಗಳು ನಾನು ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಮುಂಬಡ್ತಿ ಹೊಂದಿದ ದಿನಾಂಕ:10–05–2007 ರ ನಂತರದಲ್ಲಿ ನೇಮಕಾತಿ ಹೊಂದಿರುತ್ತಾರೆ. ಆದುದರಿಂದ ಸದರಿಯವರಗಳ ಸೇವಾ ಜೇಷ್ಠತೆಯನ್ನು ನನ್ನ ಕ್ರಮ ಸಂಖ್ಯೆಗಿಂತ ಕೆಳಗೆ ನಮೂದಿಸಬೇಕಾಗಿರುತ್ತದೆ.<br><br>4) ಮುಂದುವರೆದು ಕ್ರಮ ಸಂಖ್ಯೆ: 527 528, 530 531 ನೌಕರರುಗಳು ಬ್ಯಾಕ್‌ಲಾಗ್ ಅಡಿ ನೇಮಕಾತಿಗೊಂಡಿದ್ದು, ಸದರಿಯವರುಗಳು ನಾನು ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಮುಂಬಡ್ತಿ ಹೊಂದಿದ ದಿನಾಂಕ:10–05–2007 ರ ನಂತರದಲ್ಲಿ ನೇಮಕಾತಿ ಹೊಂದಿರುತ್ತಾರೆ. ಆದುದರಿಂದ, ಸದರಿಯವರುಗಳ ಸೇವಾ | |

| | | | | |
|---|---|---|---|---|
| | | | ಜೇಷ್ಠತೆಯನ್ನು ನನ್ನ ಕ್ರಮ ಸಂಖ್ಯೆಗಿಂತ ಕೆಳಗೆ ನಮೂದಿಸಬೇಕಾಗಿರುತ್ತದೆ.<br>ಅದೇ ರೀತಿ, ಕ್ರಮ ಸಂಖ್ಯೆ: 533 ರಿಂದ 606 ರವರೆಗಿನ ನೌಕರರುಗಳು 2018 ರ ಅಡಿಯಲ್ಲಿ ನೇರ ನೇಮಕಾತಿ ಹೊಂದಿದ್ದು, ಸದರಿಯವರುಗಳು ನೇರ ನೇಮಕಾತಿ ಅಡಿ ಪರಿಗಣಿಸಿ, ನೇರ ನೇಮಕಾತಿ ಹುದ್ದೆ ಕೋಟಾ ಅಡಿ ಉದ್ಭವವಾದ ದಿನಾಂಕದಿಂದ ಸೇವಾ ಹಿರಿತನವನ್ನು ಪರಿಗಣಿಸಲಾಗಿರುತ್ತದೆ. ಆದರೆ, ಸಾರ್ವಜನಿಕ ಹಿತದೃಷ್ಟಿಯಿಂದ ನೇರ ನೇಮಕಾತಿ ಹುದ್ದೆಯನ್ನು ಮುಂಬಡ್ತಿ ಮುಖೇನ ತುಂಬಿದ್ದಲ್ಲಿ ನೇರ ನೇಮಕಾತಿ ಹೊಂದಿದ ನೌಕರರ ಸೇವಾ ಜೇಷ್ಠತೆಯನ್ನು ಅವರುಗಳು ಹುದ್ದೆಗೆ ಪಾದಾರ್ಪಣೆ ಮಾಡಿದ ದಿನಾಂಕದಿಂದ ಪರಿಗಣಿಸಬೇಕೆ ಹೊರತು, ಖಾಲಿ ಹುದ್ದೆ ಉದ್ಭವವಾದ ದಿನಾಂಕದಿಂದ ಪರಿಗಣಿಸಲು ಬರುವುದಿಲ್ಲವೆಂದು ಮಾನ್ಯ ಸರ್ವೋಚ್ಛ ನ್ಯಾಯಾಲಯವು ಹಲವಾರು ಪ್ರಕರಣಗಳಲ್ಲಿ ಆದೇಶಿಸಿದ್ದು, ಒಂದು ಪ್ರಕರಣದ ಆದೇಶ ಕೆಳಕಂಡಂತಿದೆ;<br><br>S.B. Patwardhan v. State of Maharashtra, (1977) 3 SCC 399: 1977 SCC (L&S) 391: (1977) 3 SCR 775, affirmed Rules 4 and 9 of the 1982 Rules were rightly struck down and consequently the 1984 Rules were correctly framed and have to be upheld as legal and valid. (Para 30) Service Law Seniority and Promotion Direct recruits and promotees - Quota rule Breaks down when not followed consistently for several years due to practical impossibility of its adherence because of non-availability of direct recruits and urgent need of personnel In case of impossibility of adherence of quota rule, it should be replaced by an appropriate rule Service Law Seniority and Promotion - Direct recruits and promotees Quota rule Where quota rule broke down and appointments made from one source (promotion in this case) in excess of quota in public interest and in accordance with rules, held, seniority of such appointees (promotees) to be reckoned from the date of such appointments and not from the date when vacancy within the quota became available Accordingly such appointees (promotees) cannot be pushed down below the appointees drawn from the other source (direct recruits) at a later point of time Bombay Service Engineers (Class I and Class II) Recruitment Rules, 1960-Rule 1<br><br>ಮೇಲ್ಕಂಡ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶಾನುಸಾರ ಪರಿಶೀಲಿಸಲಾಗಿ, | |

| | | | | |
|---|---|---|---|---|
| | | | ಘನ ರಾಜ್ಯ ಸರ್ಕಾರವು ಸುತ್ತೋಲೆ ಆದೇಶ ಸಂಖ್ಯೆಸಿಆಸುಇ 56 ಸೇನೆವಿ 2000, ಬೆಂಗಳೂರು ದಿನಾಂಕ:14–08–2000 ರಲ್ಲಿ ಯಾವುದೇ ನೇರ ನೇಮಕಾತಿ ಹುದ್ದೆಗಳನ್ನು ನೇಮಕಾತಿ ಮಾಡಿರುವುದನ್ನು ನಿರ್ಬಂಧಿಸಿ (Freeze) ಆದೇಶಿಸಿಲಾಗಿರುತ್ತದೆ.<br>ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 23 ಸೇನಿಇ 2006, ದಿನಾಂಕ:06–09–2007 ರಲ್ಲಿ ನೇರ ನೇಮಕಾತಿ ಹುದ್ದೆಗಳನ್ನು ಬಡ್ತಿ ಹುದ್ದೆಗಳನ್ನಾಗಿ ಪರಿವರ್ತಿಸಿ, ಅವುಗಳನ್ನು ಬಡ್ತಿಯಿಂದ ತುಂಬುವುದು ನೇಮಕಾತಿ ನಿಯಮದ ಉದ್ದೇಶವನ್ನು ವಿಫಲಗೊಳಿಸಿದಂತಾಗುತ್ತದೆ. ಸಿವಿಲ್ ಸೇವೆಯಲ್ಲಿನ ಕೆಲವು ವೃಂದಗಳಿಗೆ ಅನುಭವಿ ನೌಕರರ ಜೊತೆಗೆ ಹೆಚ್ಚಿನ ವಿದ್ಯಾರ್ಹತೆಯನ್ನು ಹೊಂದಿರುವ ನವ ಯುವಕರನ್ನು ಪಡೆಯುವ ಉದ್ದೇಶದಿಂದ ಬಡ್ತಿ ಮತ್ತು ನೇರ ನೇಮಕಾತಿ ಕೋಟಾವನ್ನು ನಿಗಧಿಪಡಿಸಲಾಗಿರುತ್ತದೆ. ಈ ಕೋಟಾದನ್ವಯ ನೇಮಕಾತಿಯನ್ನು ಮಾಡದೇ ಇದ್ದಲ್ಲಿ ಅದು ಸಿವಿಲ್ ಸೇವೆಯ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುತ್ತದೆ. ಆದರೆ ಹಿಂದೆ ಅನೇಕ ಕಾರಣಗಳಿಂದಾಗಿ ಧೀರ್ಘ ಕಾಲದವರೆಗೆ ಕೆಲವು ವೃಂದಗಳಿಗೆ ನೇರ ನೇಮಕಾತಿ ನಡೆದಿರುವುದಿಲ್ಲ. ಈ ಹುದ್ದೆಗಳ ಕಾರ್ಯವನ್ನು ನಿರ್ವಹಿಸಲು ಅನುವಾಗುವಂತೆ ಮೋಷಕ ವೃಂದದಲ್ಲಿರುವ ನೌಕರರನ್ನು ಹಂಬಡ್ತಿಗೊಳಿಸುವುದು ಸೂಕ್ತವಲ್ಲವೆಂದು ಭಾವಿಸಿ, ನೇರ ನೇಮಕಾತಿ ಹುದ್ದೆಗಳನ್ನು ಕಾಲಕಾಲಕ್ಕೆ ತುಂಬದಿರುವುದರಿಂದ ಉಂಟಾದ ಸಮಸ್ಯೆಗಳನ್ನು ಪರಿಶೀಲಿಸಿ, ಸೂಕ್ತ ಶಿಫಾರಸ್ಸು ಮಾಡಲು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:03–05–1996 ರಲ್ಲಿ ರಚಿಸಲಾಗಿದ್ದ ಸಮಿತಿಯನ್ನು ರದ್ದುಪಡಿಸಿ ಇನ್ನು ಮುಂದೆ ನೇರ ನೇಮಕಾತಿ ಖಾಲಿ ಹುದ್ದೆಗಳನ್ನು ಕಡ್ಡಾಯವಾಗಿ ನೇರ ನೇಮಕಾತಿಯಿಂದಲೇ ತುಂಬಲು ಕ್ರಮ ತೆಗೆದುಕೊಳ್ಳುವಂತೆ ತಿಳಿಸಲಾಗಿರುತ್ತದೆ.<br><br>ಮೇಲ್ಕಂಡ ಆದೇಶದ ನಂತರದಲ್ಲಿ, ಪಾಲಿಕೆಯಲ್ಲಿ ಖಾಲಿ ಇದ್ದ ಪ್ರಥಮ ದರ್ಜೆ ಸಹಾಯಕರ ಹುದ್ದೆಯನ್ನು 2007 ರಲ್ಲಿ ನೇರ ನೇಮಕಾತಿ ಅಡಿಯಲ್ಲಿ ತುಂಬಲು ಕ್ರಮವಹಿಸಿರುವುದನ್ನು ಗಮನಿಸಬೇಕಾಗಿರುತ್ತದೆ.<br>ಮೇಲ್ಕಂಡ ಸುತ್ತೋಲೆಯನ್ನು ಅವಲೋಕಿಸಿ ಹಾಗೂ 1976ನೇ ಸಾಲಿನಿಂದ 2007ನೇ ಸಾಲಿನವರೆಗೂ ನೇರ ನೇಮಕಾತಿ ಹುದ್ದೆಗಳ ಭರ್ತಿಯಾಗಿರುವುದಿಲ್ಲವೆಂಬುದಾಗಿ ಅರ್ಥೈಸಿಕೊಳ್ಳಬೇಕಾಗಿರುತ್ತದೆ. ಸದರಿ ಸುತ್ತೋಲೆಗಳ ಪ್ರತಿಯನ್ನು ಆಕ್ಷೇಪಣಾ ಪತ್ರದೊಂದಿಗೆ ಲಗತ್ತಿಸಿದೆ.<br>ಆದಾಗ್ಯೂ ಏಕಾಏಕಿ ದಿನಾಂಕ:11–09–1977 ರಿಂದ ದಿನಾಂಕ:04–10–2008 ರ ವರೆಗೆ ಸುಮಾರು ಮೂಮತ್ತು ವರ್ಷಗಳಿಗೆ ಒಂದೇ ಬ್ಲಾಕ್ ಅವಧಿಯನ್ನು | |

| | | | | |
|---|---|---|---|---|
| | | | ನಿಗಧಿಪಡಿಸಿ, 7ನೇ ಬ್ಲಾಕ್ ಅವಧಿಯನ್ನು ರಚಿಸಲಾಗಿರುವುದು ಸೂಕ್ತವಾಗಿರುವುದಿಲ್ಲ. ಮುಂದುವರೆದಂತೆ, ದಿನಾಂಕ:01–01–2015 ಕ್ಕೆ ಇರುವಂತೆ ಹೊರಡಿಸಲಾಗಿದ್ದ ಪ್ರಥಮ ದರ್ಜೆ ಸಹಾಯಕರ ಸೇವಾ ಜೇಷ್ಠತೆಗೆ ಸಂಬಂಧಿಸಿದಂತೆ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾಗ್ಯೂ ಆಡಳಿತಾತ್ಮಕವಾಗಿ ಯಾವುದೇ ಕ್ರಮವಹಿಸದೇ ಇರುವ ಹಿನ್ನಲೆಯಲ್ಲಿ ಸದರಿ ವಿಷಯವಾಗಿ ಘನ ಉಚ್ಚನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ:39961/2016 ರಂತೆ ದಾವೆ ಹೂಡಿದ್ದು, ಅಂತಿಮವಾಗಿ ಮಾನ್ಯ ನ್ಯಾಯಾಲಯವು ದಿನಾಂಕ:11–10–2023 ರಂದು ವಿಚಾರಣೆ ನಡೆಸಿ, ಪ್ರಕರಣವನ್ನು ತೀರ್ಪಿಗಾಗಿ ಕಾಯ್ದಿರಿಸಿದ್ದು, ನ್ಯಾಯಾಲಯದ ಆದೇಶದ ನಿರೀಕ್ಷಣೆಯಲ್ಲಿರಲಾಗಿದೆ. ಆದ್ದರಿಂದ, ಪ್ರಸ್ತಾಪಿತ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ಅಂತಿಮ ತೀರ್ಪು ನೀಡುವವರೆಗೂ ಉಲ್ಲೇಖಿತದಂತೆ ಹೊರಡಿಸಲಾಗಿರುವ ಪ್ರಥಮ ದರ್ಜೆ ಸಹಾಯಕರ ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಬಾರದೆಂದು ಈ ಮೂಲಕ ತಮ್ಮಲ್ಲಿ ಕೋರುತ್ತೇನೆ. | |
| 2. | 1) ಇ ಸುರೇಶ್ ವ್ಯವಸ್ಥಾಪಕರು ಸ.ಕಂ.ಅ ಶಾಂತಿನಗರ<br><br>2) ಎಸ್. ಶಿವಶಂಕರ್ ವ್ಯವಸ್ಥಾಪಕರು ಕಾ.ಪ.ಅ (ಬ್ಯಾಟರಾಯನಪುರ)<br><br>3) ಸಿದ್ದಲಿಂಗೇಶ್ ಪ್ರ.ದ.ಸ ಸ.ಕಾ.ನಿ.ಅ (ಹೆಚ್.ಎಸ್.ಆರ್.ಲೇಔಟ್)<br><br>4) ಎಂ. ನಾಗರಾಜ್ ವ್ಯವಸ್ಥಾಪಕರು ನಿವೃತ್ತಿ ಜಂಟಿ ನಿರ್ದೇಶಕರು ನಗರ | 20–11–2023<br><br>23–11–2023<br><br>24–11–2023<br><br>24–11–2023<br><br>20–11–2023 | ಈ ಕೆಳಕಂಡಂತೆ ಸಹಿ ಮಾಡಿರುವ ಚಂದ್ರಪ್ರಕಾಶ್.ಎಂ ಆದ ನಾನು ಪ್ರಥಮ ದರ್ಜೆ ಸಹಾಯಕರ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಈ ಕೆಳಕಂಡಂತೆ ಆಕ್ಷೇಪಣೆ ಸಲ್ಲಿಸುತ್ತಿದ್ದೇನೆ<br><br>ಉಲ್ಲೇಖಿತದಂತೆ ಹೊರಡಿಸಿರುವ ಪ್ರಥಮ ದರ್ಜೆ ಸಹಾಯಕರ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ನನ್ನ ಕ್ರಮ ಸಂಖ್ಯೆ:667 ರಲ್ಲಿ ನಮೂದಿಸಿದ್ದು, ವಾಸ್ತವವಾಗಿ ನನಗೆ ಸೇವಾ ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ:509 ರಲ್ಲಿ ನಮೂದಾಗಬೇಕಾಗಿರುತ್ತದೆ. ಏಕೆಂದರೆ, ನಾನು ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಿಂದ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ದಿನಾಂಕ:18–01–2008 ರಲ್ಲಿ ಮುಂಬಡ್ತಿ ಹೊಂದಿರುತ್ತೇನೆ.<br><br>2) ಉಲ್ಲೇಖಿತದ ಪ್ರಥಮ ದರ್ಜೆ ಸಹಾಯಕರ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ:509 ರಿಂದ 519 ರವರೆಗಿನ ನೌಕರರುಗಳು ವಾಸ್ತವವಾಗಿ ಸಮುದಾಯ ಸಂಘಟಕರಾಗಿದ್ದು, ಇವರುಗಳು ಎಸ್.ಜೆ.ಎಸ್.ಆರ್.ವೈ ಯೋಜನೆ ಅಡಿ ತಾತ್ಕಾಲಿಕವಾಗಿ ನೇಮಕಾತಿಗೊಂಡು, ನಂತರದಲ್ಲಿ ದಿನಾಂಕ:28–10–2005 ರಂದು ಸದರಿಯವರ ಸೇವೆಯನ್ನು ಖಾಯಂಗೊಳಿಸಲಾಗಿರುತ್ತದೆ. ಈ ಸಂಧರ್ಭದಲ್ಲಿ ಸದರಿಯವರುಗಳ ವೇತನ ಶ್ರೇಣಿ ರೂ.3000–5450 ಆಗಿದ್ದು, ಈ ವೇತನ ಶ್ರೇಣಿಯು ದ್ವಿತೀಯ ದರ್ಜೆ ಸಹಾಯಕರ ವೇತನ ಶ್ರೇಣಿಯ ಸಮಾನಾಂತರವಾಗಿರುತ್ತದೆ.<br><br>ನಂತರದಲ್ಲಿ, 5ನೇ ರಾಜ್ಯ ವೇತನ ಆಯೋಗದ ಅಂತಿಮ ವರದಿಯಲ್ಲಿನ ಶಿಫಾರಸ್ಸಿನ ಅನ್ವಯ ಕೆಲವೊಂದು ಹುದ್ದೆಗಳಿಗೆ ಹೆಚ್ಚಿನ ವೇತನ ಶ್ರೇಣಿಯನ್ನು ನೀಡಲು ಶಿಫಾರಸ್ಸು | ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿ, ಮಾನ್ಯ ನ್ಯಾಯಾಲಯದ ಅಂತಿಮ ಆದೇಶ ಬಾರದಿರುವ ಹಿನ್ನೆಲೆಯಲ್ಲಿ ಆಕ್ಷೇಪಣೆಗಳನ್ನು ಸದ್ಯಕ್ಕೆ ಪರಿಗಣಿಸಲು ಬರುವುದಿಲ್ಲವೆಂದು ತೀರ್ಮಾನಿಸಿ ವಿಲೇವಾರಿ ಮಾಡಲಾಯಿತು. |

| | | | | |
|---|---|---|---|---|
| | ಯೋಜನೆ ಉತ್ತರ<br><br>5) ಎಸ್. ಹರೀಶ್ ಕುಮಾರ್ ವ್ಯವಸ್ಥಾಪಕರು ಸಹಾಯಕ ಆಯುಕ್ತರು (ಆಡಳಿತ)<br><br>6) ಪಿ. ನಾಗರಾಜ್ ವ್ಯವಸ್ಥಾಪಕರು ಸಹಾಯಕ ಆಯುಕ್ತರು ಆಡಳಿತ<br><br>7) ಕೆ.ಚಂದ್ರ ಮೌಲ್ಯಮಾಪಕರು ಸ.ಕಂ.ಅ ಥಣಿಸಂದ್ರ | 20–11–2023<br><br>20–11–2023 | ಮಾಡಿದ್ದು, ಅದರಂತೆ ಸಮುದಾಯ ಸಂಘಟಕರ ವೇತನ ಶ್ರೇಣಿಯನ್ನು 5800–10500 (5ನೇ ವೇತನ ಆಯೋಗದ ಅನ್ವಯ ದ್ವಿತೀಯ ದರ್ಜೆ ಸಹಾಯಕರ ವೇತನ ಶ್ರೇಣಿಗಳಿಂದ ರೂ.7275–13350 ಗಳಿಗೆ ಪರಿಷ್ಕೃತಗೊಳಿಸಿ (ಪ್ರಥಮ ದರ್ಜೆ ಸಹಾಯಕರ ವೇತನ ಶ್ರೇಣಿ) ಆದೇಶ ಹೊರಡಿಸಿದ್ದು, ಪರಿಷ್ಕೃತ ವೇತನ ಶ್ರೇಣಿಯನ್ನು ದಿನಾಂಕ:03–06–2010 ರಿಂದ ಜಾರಿಗೆ ಬರುವಂತೆ ನಿಗಧಿಪಡಿಸಿ ಸರ್ಕಾರವು ಆದೇಶ ಹೊರಡಿಸಿರುತ್ತದೆ. ಅದರಂತೆ ಸದರಿಯವರುಗಳನ್ನು ಪ್ರಥಮ ದರ್ಜೆ ಸಹಾಯಕರ ಹುದ್ದೆಯಲ್ಲಿ ದಿನಾಂಕ:03–06–2010 ರಿಂದ ಜಾರಿಗೆ ಬರುವಂತೆ ಸೇವಾ ಜೇಷ್ಠತೆಯನ್ನು ನಿಗಧಿಪಡಿಸಬೇಕಾಗಿರುವುದು. ಆದರೆ ಸದರಿಯವರುಗಳನ್ನು ದಿನಾಂಕ: 28–10–2005 ರಿಂದ ಜಾರಿಗೆ ಬರುವಂತೆ ಪ್ರಥಮ ದರ್ಜೆ ಸಹಾಯಕರ ಹುದ್ದೆಯಲ್ಲಿ ಸೇವಾ ಜೇಷ್ಠತೆಯನ್ನು ನಿಗಧಿಪಡಿಸಿರುವುದು ಸಮಂಜಸವಾಗಿರುವುದಿಲ್ಲ.<br><br>ಮುಂದುವರೆದು, ದಿನಾಂಕ:31–08–2015 ರಂದು ಮಾನ್ಯ ಆಡಳಿತಗಾರರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿಯೂ ಸಹ "ಸಮುದಾಯ ಸಂಘಟಕರು ದ್ವಿತೀಯ ದರ್ಜೆ ಸಹಾಯಕ ವೃಂದದ ವೇತನ ಶ್ರೇಣಿಯಲ್ಲಿ ಇದ್ದುದ್ದರಿಂದ ದಿನಾಂಕ:01–07–2007 ರಿಂದ ದಿನಾಂಕ:03–06–2010 ರವರೆಗೆ ಅವರನ್ನು ದ್ವಿತೀಯ ದರ್ಜೆ ಸಹಾಯಕ ವೃಂದ ಹಾಗೂ ವೇತನ ಶ್ರೇಣಿಯ ಜೇಷ್ಠತೆಯಲ್ಲಿ ಪರಿಗಣಿಸುವುದು ಸೂಕ್ತ, ದಿನಾಂಕ:03–06–2010 ರಿಂದ ಅವರನ್ನು ಪರಿಷ್ಕೃತ ವೇತನ ಶ್ರೇಣಿಯಾದ ಪ್ರಥಮ ದರ್ಜೆ ಸಹಾಯಕ ಶ್ರೇಣಿಯ ಜೇಷ್ಠತೆಯಲ್ಲಿ ಪರಿಗಣಿಸುವುದು. 2010 ರ ಸರ್ಕಾರದ ಆದೇಶದಂತೆ ಸದರಿ ನೌಕರರುಗಳ ಪರಿಷ್ಕೃತ ವೇತನವು ತಕ್ಷಣದಿಂದ ಜಾರಿಗೆ ಬರುವಂತೆ (ದಿನಾಂಕ:03–06–2010 ರಿಂದ) ಎಂದು ಆದೇಶಿಸಿರುವುದರಿಂದ ಅಂದರೆ ಹಿಂದಿನ ದಿನಾಂಕವಾದ 01–01–2007 ರಿಂದ ಅನ್ವಯವಾಗುವುದಿಲ್ಲ. ವಿಲೀನಾತಿಗೊಂಡ ದಿನಾಂಕದಿಂದಲೇ ಪರಿಷ್ಕೃತ ವೇತನ ಶ್ರೇಣಿಯ ಆಧಾರದ ಮೇಲೆ ಸೇವಾ ಜೇಷ್ಠತೆಯನ್ನು ನಿಗಧಿಪಡಿಸುವುದು ನಿಯಮಾಬಾಹಿರವಾಗಿರುತ್ತದೆ. ಎಂದು ತೀರ್ಮಾನಿಸಲಾಗಿರುತ್ತದೆ.<br><br>ಅದರಂತೆ, ಸದರಿಯವರುಗಳನ್ನು ಪ್ರಥಮ ದರ್ಜೆ ಸಹಾಯಕರ ಸೇವಾ ಜೇಷ್ಠತೆಯಲ್ಲಿ ಅವರುಗಳು ದಿನಗೂಲಿಯಿಂದ ಖಾಯಂ ಆದ ದಿನಾಂಕದಿಂದ ನಿಗಧಿಪಡಿಸಿರುವುದು ಸರಿಯಾದ ಕ್ರಮವಾಗಿರುವದಿಲ್ಲ.<br><br>ಮುಂದುವರೆದು ಕ್ರಮ ಸಂಖ್ಯೆ:531 ನೌಕರರುಗಳು ಬ್ಯಾಕ್‌ಲಾಗ್ ಅಡಿ ನೇಮಕಾತಿಗೊಂಡಿದ್ದು, ಸದರಿಯವರುಗಳು ನಾನು ಪ್ರಥಮ ದರ್ಜೆ ಸಹಾಯಕರ | |

| | | | | |
|---|---|---|---|---|
| | | | ಹುದ್ದೆಗೆ ಮುಂಬಡ್ತಿ ಹೊಂದಿದ ದಿನಾಂಕ:18.01.2008 ರ ನಂತರದಲ್ಲಿ ನೇಮಕಾತಿ ಹೊಂದಿರುತ್ತಾರೆ. ಆದುದರಿಂದ, ಸದರಿಯವರುಗಳ ಸೇವಾ ಜೇಷ್ಠತೆಯನ್ನು ನನ್ನ ಕ್ರಮ ಸಂಖ್ಯೆಗಿಂತ ಕೆಳಗೆ ನಮೂದಿಸಬೇಕಾಗಿರುತ್ತದೆ.<br><br>ಅದೇ ರೀತಿ, ಕ್ರಮ ಸಂಖ್ಯೆ: 533 ರಿಂದ 606 ರವರೆಗಿನ ನೌಕರರುಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೃಷ್ಟಿಯಾದ 100 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳಲ್ಲಿ ಅಕ್ಟೋಬರ್–2008ರಲ್ಲಿ ನೇರ ನೇಮಕಾತಿ ಹೊಂದಿದ್ದು, ಸದರಿಯವರುಗಳು ನೇರ ನೇಮಕಾತಿ ಅಡಿ ಪರಿಗಣಿಸಿ ನೇರ ನೇಮಕಾತಿ ಹುದ್ದೆ ಕೊಟಾ ಅಡಿ ಉದ್ಭವವಾದ ದಿನಾಂಕದಿಂದ ಸೇವಾ ಹಿರಿತನವನ್ನು ಪರಿಗಣಿಸಲಾಗಿರುತ್ತದೆ. ಆದರೆ ಸಾರ್ವಜನಿಕ ಹಿತದೃಷ್ಟಿಯಿಂದ ನೇರ ನೇಮಕಾತಿ ಹುದ್ದೆಯನ್ನು ಮುಂಬಡ್ತಿ ಮುಖೇನ ತುಂಬಿದ್ದಲ್ಲಿ ನೇರ ನೇಮಕಾತಿ ಹೊಂದಿದ ನೌಕರರ ಸೇವಾ ಜೇಷ್ಠತೆಯನ್ನು ಅವರುಗಳು ಹುದ್ದೆಗೆ ಪಾದಾರ್ಪಣೆ ಮಾಡಿದ ದಿನಾಂಕದಿಂದ ಪರಿಗಣಿಸಬೇಕೆ ಹೊರೆತು, ಖಾಲಿ ಹುದ್ದೆ ಉದ್ಭವವಾದ ದಿನಾಂಕದಿಂದ ಪರಿಗಣಿಸಲು ಬರುವುದಿಲ್ಲವೆಂದು ಮಾನ್ಯ ಸರ್ವೋಚ್ಛ ನ್ಯಾಯಾಲಯವು ಹಲವಾರು ಪ್ರಕರಣಗಳಲ್ಲಿ ಆದೇಶಿಸಿದ್ದು, ಒಂದು ಪ್ರಕರಣಗಳ ಆದೇಶ ಕೆಳಕಂಡಂತಿದೆ.<br>S.B. Patwardhan v. State of Maharashtra, (1977) 3 SCC 399: 1977 SCC (L&S) 391: (1977) 3 SCR 775, affirmed Rules 4 and 9 of the 1982 Rules were rightly struck down and consequently the 1984 Rules were correctly framed and have to be upheld as legal and valid. (Para 30)Service Law Seniority and Promotion Direct recruits and promotees - Quota rule Breaks down when not followed consistently for several years due to practical impossibility of its adherence because of non-availability of direct recruits and urgent need of personnel In case of impossibility of adherence of quota rule, it should be replaced by an appropriate rule Service Law Seniority and Promotion - Direct recruits and promotees Quota rule Where quota rule broke down and appointments made from one source (promotion in this case) in excess of quota in public interest and in accordance with rules, held, seniority of such appointees (promotees) to be reckoned from the date of such appointments and not from the date when vacancy within the quota became available Accordingly such appointees (promotees) cannot be pushed down below the appointees drawn from the other source (direct recruits) at a later point of time Bombay Service Engineers (Class I and Class II) Recruitment Rules, 1960-Rule 1 | |

| | | | | |
|---|---|---|---|---|
| | | | ಹಾಗೂ **Appeal (Civil) 3034/2000 D: 28.04.2000,** ಪ್ರಕರಣದ ದಿನಾಂಕ:28.04.20005 Point-4-Whether the direct recruits could claim a retrospective date of recruitment from the date on which the post in direct recruitment was available, even though the direct recruit was not appointed by that date and was<br><br>appointed long thereafter? The Hon'ble Supreme Court relief on point<br>Direct recruit cannot claim appointment from date of vacancy in qouta before their selection:<br><br>We have next to refer to one other contention raised by the second respondents direct recruits. They claimed that the direct recruitment appointment can be amestated from the date of occurrence of a vacancy in the direct recruitment quota, even if on that date the said person was not directly recruited. It was submitted that if the promotees occupied the quota belonging to direct recruits they had to be pushed down, whenever direct recruitment was made. Once they were so pushed down, even if the direct recruit came later, he should be put in the direct recruit slot from the date on which such a slot was available under direct recruitment quota.<br><br>This contention, in our view, cannot be accepted. The reason as to why this argument is wrong is that in service jurisprudence, a direct recruit can claim seniority only from the date of his regular appointment He cannot claim seniority from a date when he was not born in the service. This principle is well settled. In N.K.Chauhan v. State of Gujurat.[1977]SCC308(at p.321) Krishna Iyer, J. stated<br><br>"Later direct recruit cannot claim deemed dates of appointment for seniority with effect from the time when direct recruitment vacancy arose. Seniority will depend upon length of service".<br><br>Again, in A.Janardhana v. Union of India, [1983] SCR 936, it was held that a later direct recruit cannot claim seniority from a date before his birth in the service or<br><br>when he was in school or college Similarly it was pointed out in A.N Pathak v. | |

| | | | | |
|---|---|---|---|---|
| | | | Secretary to the government.[1987]Suppl., SCC 763 (at 767) that slots cannot be kept<br><br>reserved for the direct recruits nor retrospective appointments. What we have studied in point 1-4 in respect of ad hoc Engineers applies to ad hoc Assistant Executive Engineers, to the extent of the principles laid down, are applicable. We say this in view of point 2 that was framed by high court covering both the cadres. We hold on points I to 4 as stated above<br>ಮೇಲ್ಕಂಡ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶಾನುಸಾರ ಪರಿಶೀಲಿಸಲಾಗಿ, ಘನ ರಾಜ್ಯ ಸರ್ಕಾರವು ಸುತ್ತೋಲೆ ಆದೇಶ ಸಂಖ್ಯೆ:ಸಿಆಸುಇ 56 ಸೆನೆವಿ 2000, ಬೆಂಗಳೂರು ದಿನಾಂಕ:14–08–2000 ರಲ್ಲಿ ಯಾವುದೇ ನೇರ ನೇಮಕಾತಿ ಹುದ್ದೆಗಳನ್ನು ನೇಮಕಾತಿ ಮಾಡಿರುವುದನ್ನು ನಿರ್ಬಂಧಿಸಿ (ಈಡಿಜಜದಜ) ಆದೇಶಿಸಿಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 23 ಸೇನಿಇ 2006, ದಿನಾಂಕ:06–09–2007 ರಲ್ಲಿ ನೇರ ನೇಮಕಾತಿ ಹುದ್ದೆಗಳನ್ನು ಬಡ್ತಿ ಹುದ್ದೆಗಳನ್ನಾಗಿ ಪರಿವರ್ತಿಸಿ, ಅವುಗಳನ್ನು ಬಡ್ತಿಯಿಂದ ತುಂಬುವುದು ನೇಮಕಾತಿ ನಿಯಮದ ಉದ್ದೇಶವನ್ನು ವಿಫಲಗೊಳಿಸಿದಂತಾಗುತ್ತದೆ. ಸಿವಿಲ್ ಸೇವೆಯಲ್ಲಿನ ಕೆಲವು ವೃಂದಗಳಿಗೆ ಅನುಭವಿ ನೌಕರರ ಜೊತೆಗೆ ಹೆಚ್ಚಿನ ವಿದ್ಯಾರ್ಹತೆಯನ್ನು ಹೊಂದಿರುವ ನವ ಯುವಕರನ್ನು ಪಡೆಯುವ ಉದ್ದೇಶದಿಂದ ಬಡ್ತಿ ಮತ್ತು ನೇರ ನೇಮಕಾತಿ ಕೋಟಾವನ್ನು ನಿಗಧಿಪಡಿಸಲಾಗಿರುತ್ತದೆ. ಈ ಕೋಟಾದನ್ವಯ ನೇಮಕಾತಿಯನ್ನು ಮಾಡದೇ ಇದ್ದಲ್ಲಿ ಅದು ಸಿವಿಲ್ ಸೇವೆಯ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುತ್ತದೆ. ಆದರೆ ಹಿಂದೆ ಅನೇಕ ಕಾರಣಗಳಿಂದಾಗಿ ಧೀರ್ಘ ಕಾಲದವರೆಗೆ ಕೆಲವು ವೃಂದಗಳಿಗೆ ನೇರ ನೇಮಕಾತಿ ನಡೆದಿರುವುದಿಲ್ಲ. ಈ ಹುದ್ದೆಗಳ ಕಾರ್ಯವನ್ನು ನಿರ್ವಹಿಸಲು ಅನುವಾಗುವಂತೆ ಪೋಷಕ ವೃಂದದಲ್ಲಿರುವ ನೌಕರರನ್ನು ಹಂಬಡ್ತಿಗೊಳಿಸುವುದು ಸೂಕ್ತವಲ್ಲವೆಂದು ಭಾವಿಸಿ, ನೇರ ನೇಮಕಾತಿ ಹುದ್ದೆಗಳನ್ನು ಕಾಲಕಾಲಕ್ಕೆ ತುಂಬದಿರುವುದರಿಂದ ಉಂಟಾದ ಸಮಸ್ಯೆಗಳನ್ನು ಪರಿಶೀಲಿಸಿ, ಸೂಕ್ತ ಶಿಫಾರಸ್ಸು ಮಾಡಲು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:03–05–1996 ರಲ್ಲಿ ರಚಿಸಲಾಗಿದ್ದ ಸಮಿತಿಯನ್ನು ರದ್ದುಪಡಿಸಿ ಇನ್ನು ಮುಂದೆ ನೇರ ನೇಮಕಾತಿ ಖಾಲಿ ಹುದ್ದೆಗಳನ್ನು ಕಡ್ಡಾಯವಾಗಿ ನೇರ ನೇಮಕಾತಿಯಿಂದಲೇ ತುಂಬಲು ಕ್ರಮ ತೆಗೆದುಕೊಳ್ಳುವಂತೆ ತಿಳಿಸಲಾಗಿರುತ್ತದೆ. | |

| | | | | |
|---|---|---|---|---|
| | | | ಮೇಲ್ಕಂಡ ಆದೇಶದ ನಂತರದಲ್ಲಿ, ಪಾಲಿಕೆಯಲ್ಲಿ ಖಾಲಿ ಇದ್ದ ಪ್ರಥಮ ದರ್ಜೆ ಸಹಾಯಕರ ಹುದ್ದೆಯನ್ನು 2007 ರಲ್ಲಿ ನೇರ ನೇಮಕಾತಿ ಅಡಿಯಲ್ಲಿ ತುಂಬಲು ಕ್ರಮವಹಿಸಿರುವುದನ್ನು ಗಮನಿಸಬೇಕಾಗಿರುತ್ತದೆ.<br><br>ಮೇಲ್ಕಂಡ ಸುತ್ತೋಲೆಯನ್ನು ಅವಲೋಕಿಸಿ ಹಾಗೂ 1976ನೇ ಸಾಲಿನಿಂದ 2007ನೇ ಸಾಲಿನವರೆಗೂ ನೇರ ನೇಮಕಾತಿ ಹುದ್ದೆಗಳ ಭರ್ತಿಯಾಗಿರುವುದಿಲ್ಲವೆಂಬುದಾಗಿ ಅರ್ಥೈಸಿಕೊಳ್ಳಬೇಕಾಗಿರುತ್ತದೆ. ಸದರಿ ಸುತ್ತೋಲೆಗಳ ಪ್ರತಿಯನ್ನು ಆಕ್ಷೇಪಣಾ ಪತ್ರದೊಂದಿಗೆ ಲಗತ್ತಿಸಿದೆ.<br><br>ಆದಾಗ್ಯೂ ಏಕಾಏಕಿ ದಿನಾಂಕ:11–09–1977 ರಿಂದ ದಿನಾಂಕ:04–10–2008 ರ ವೆರೆಗೆ ಸುಮಾರು ಮೂವತ್ತು ವರ್ಷಗಳಿಗೆ ಒಂದೇ ಬ್ಲಾಕ್ ಅವಧಿಯನ್ನು ನಿಗಧಿಪಡಿಸಿ, 7ನೇ ಬ್ಲಾಕ್ ಅವಧಿಯನ್ನು ರಚಿಸಲಾಗಿರುವುದು ನಿಯಮ ಹಾಗೂ ಘನ ಸರ್ವೋಚ್ಛ ನ್ಯಾಯಾಲಯಗಳ ಆದೇಶಗಳಿಗೆ ವಿರುದ್ಧವಾಗಿರುತ್ತದೆ.<br><br>ಮುಂದುವರೆದಂತೆ, ದಿನಾಂಕ:01–01–2015ಕ್ಕೆ ಇರುವಂತೆ ಹೊರಡಿಸಲಾಗಿದ್ದ ಪ್ರಥಮ ದರ್ಜೆ ಸಹಾಯಕರ ಸೇವಾ ಜೇಷ್ಠತೆಗೆ ಸಂಬಂಧಿಸಿದಂತೆ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾಗ್ಯೂ ಆಡಳಿತಾತ್ಮಕವಾಗಿ ಯಾವುದೇ ಕ್ರಮವಹಿಸದೇ ಇರುವ ಹಿನ್ನಲೆಯಲ್ಲಿ ಸದರಿ ವಿಷಯವಾಗಿ ಘನ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ:39961/2016 ರಂತೆ ದಾವೆ ಹೂಡಿದ್ದು, ಅಂತಿಮವಾಗಿ ಮಾನ್ಯ ನ್ಯಾಯಾಲಯವು ದಿನಾಂಕ: 11–10–2023ರಂದು ವಿಚಾರಣೆ ನಡೆಸಿ, ಪ್ರಕರಣವನ್ನು ತೀರ್ಪಿಗಾಗಿ ಕಾಯ್ದಿರಿಸಿದ್ದು, ನ್ಯಾಯಾಲಯದ ಆದೇಶದ ನಿರೀಕ್ಷಣೆಯಲ್ಲಿರಲಾಗಿದೆ. ಆದ್ದರಿಂದ, ಪ್ರಸ್ತಾಪಿತ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ಅಂತಿಮ ತೀರ್ಪು ನೀಡುವವರೆಗೂ ಉಲ್ಲೇಖಿತದಂತೆ ಹೊರಡಿಸಲಾಗಿರುವ ಪ್ರಥಮ ದರ್ಜೆ ಸಹಾಯಕರ ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಬಾರದೆಂದು ಈ ಮೂಲಕ ತಮ್ಮಲ್ಲಿ ಕೋರುತ್ತೇನೆ. | |
| 3. | ಗ್ರೇಸ್ ನಿರ್ಮಲ ಎಸ್. ಪ್ರ.ದ.ಸ | 15–11–2023 | ಈ ಕೆಳಕಂಡಂತೆ ಸಹಿ ಮಾಡಿರುವ ಗ್ರೇಸ್ ನಿರ್ಮಲ. ಎಸ್. ಆದ ನಾನು ಪ್ರಥಮ ದರ್ಜೆ ಸಹಾಯಕರ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಈ ಕೆಳಕಂಡಂತೆ ಆಕ್ಷೇಪಣೆ ಸಲ್ಲಿಸುತ್ತಿದ್ದೇನೆ<br><br>ಮುಖ್ಯ ಆಯುಕ್ತರ ಕಛೇರಿ ಆದೇಶ ಸಂಖ್ಯೆ: ಬಿ12(1ಜಿ)ಪಿಆರ್/10/21/22/23–24, ದಿನಾಂಕ: 08–11–2023ರ ಪ್ರಥಮ ದರ್ಜೆ ಸಹಾಯಕರ ಅಂತಿಮ ಸೇವಾ ಜೇಷ್ಠತಾ ಪಟ್ಟಿಯಲ್ಲಿ ನನ್ನ ಹೆಸರು ಕ್ರ.ಸಂ. 718 ರಲ್ಲಿ ಇದ್ದು, ವಾಸ್ತವವಾಗಿ ಮುಂಬಡ್ತಿ ಹೊಂದಿದ ದಿನಾಂಕ: 23–07–2018 ಮತ್ತು ಅರ್ಹತಾ ದಿನಾಂಕ: 23–07–2018 | ಆಕ್ಷೇಪಣೆಯನ್ನು ಪರಿಶೀಲಿಸಲಾಯಿತು. ಮುಖ್ಯ ಆಯುಕ್ತರ ಕಛೇರಿ ಆದೇಶ ಮುಖ್ಯ ಆಯುಕ್ತರ ಕಛೇರಿ ಆದೇಶ ಸಂಖ್ಯೆ: ಬಿ12(1ಜಿ)ಪಿಆರ್/139/22–23, ದಿನಾಂಕ: 28–09–2022ರ ಆದೇಶದಲ್ಲಿ ಸದರಿಯವರಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಯಲ್ಲಿ ದಿನಾಂಕ:18–01–2008 ರಿಂದ |

| | | | | |
|---|---|---|---|---|
| | | | ಎಂಬುದಾಗಿ ನಮೂದಾಗಿರುತ್ತದೆ. (ಪ್ರತಿ ಲಗತ್ತಿಸಿದೆ)<br><br>ಮಾನ್ಯ ವಿಶೇಷ ಆಯುಕ್ತರ ಮುಖ್ಯ ಆಯುಕ್ತರ ಕಛೇರಿ ಆದೇಶ ಸಂಖ್ಯೆ: ಬಿ12(1ಜಿ)ಪಿಆರ್/139/22–23, ದಿನಾಂಕ: 28–09–2022ರ ಆದೇಶದಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ದಿನಾಂಕ:18–01–2008 ರಿಂದ ಅನ್ವಯವಾಗುವಂತೆ ಸೇವಾ ಹಿರಿತನವನ್ನು ಪರಿಷ್ಕರಿಸಿ ಮನರ್ ನಿಗಧಿಪಡಿಸಿರುತ್ತಾರೆ. (ಪ್ರತಿ ಲಗತ್ತಿಸಿದೆ)<br><br>ಆದ್ದರಿಂದ ಮುಖ್ಯ ಆಯುಕ್ತರ ಕಛೇರಿ ಆದೇಶ ಸಂಖ್ಯೆ; ಬಿ12(1ಜಿ)ಪಿಆರ್/139/22–23, ದಿನಾಂಕ: 28–09–2022ಸೇವಾ ಜೇಷ್ಠತಾ ಪಟ್ಟಿಯಲ್ಲಿ ಮುಂಬಡ್ತಿ ದಿನಾಂಕವನ್ನು ಸರಿ ಪಡಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ. | ಅನ್ವಯವಾಗುವಂತೆ, ಸೇವಾ ಹಿರಿತನವನ್ನು ಪರಿಷ್ಕರಿಸಿ ಮನರ್ ನಿಗಧಿಪಡಿಸಿ ಆದೇಶಿಸಲಾಗಿರುವ ಹಿನ್ನೆಲೆಯಲ್ಲಿ ಸದರಿಯವರ ಆಕ್ಷೇಪಣೆಯನ್ನು ಪರಿಗಣಿಸಲು ತೀರ್ಮಾನಿಸಿ, ಸದರಿ ಆಕ್ಷೇಪಣೆಯನ್ನು ವಿಲೇವಾರಿ ಮಾಡಲಾಯಿತು. |
| 4. | ಎಂ.ನಾಗರಾಜು<br>ವ್ಯವಸ್ಥಾಪಕರು | 17–11–2023 | ದಿನಾಂಕ: 31–05–2023ರಂದು ಮಾನ್ಯ ಮುಖ್ಯ ಆಯುಕ್ತರ ಕಛೇರಿ ಆದೇಶದಂತೆ ವಯೋನಿವೃತ್ತಿ ಹೊಂದಿದ್ದು, ಪ್ರಥಮ ದರ್ಜೆ ಸಹಾಯಕರ ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಯನ್ನು ಪ್ರಚುರಪಡಿಸಿದ್ದು, ತನ್ನ ಹೆಸರು ಕ್ರಮ ಸಂಖ್ಯೆ: 675ರಲ್ಲಿ ತಪ್ಪಾಗಿ ನಮೂದಾಗಿರುತ್ತದೆ. ತನ್ನನ್ನು ದ್ವಿತೀಯ ದರ್ಜೆ ಸಹಾಯಕರ ಸೇವೆಯಲ್ಲಿ ಸಕ್ರಮಗೊಳಿಸಿದ ದಿನಾಂಕ: 01–06–1995ಕ್ಕೆ ಬದಲಾಗಿ ದಿನಾಂಕ: 01–04–1994ಕ್ಕೆ ಅನ್ವಯವಾಗುವಂತೆ ಕ್ರಮಬದ್ಧಗೊಳಿಸಲಾಗಿದೆ. ಪ್ರಥಮ ದರ್ಜೆ ಸಹಾಯಕರ ಹುದ್ದೆಯನ್ನು ತನಗಿಂತ ಸೇವೆಯಲ್ಲಿ ಕಿರಿಯವರಾದ ಹಾಗೂ ಸಾಮಾನ್ಯ ವರ್ಗದವರಾಗಿರುವ ಶ್ರೀ ಎಂ.ಚಂದ್ರಪ್ರಕಾಶ್, ಪ್ರಥಮ ದರ್ಜೆ ಸಹಾಯಕರು ಕ್ರಮ ಸಂಖ್ಯೆ; 667ರಲ್ಲಿ ನಮೂದಾಗಿರುತ್ತದೆ. ಆದುದರಿಂದ ತಾವು ತನ್ನ ಹೆಸರನ್ನು 675ಕ್ಕೆ ಬದಲಾಗಿ 667ರಲ್ಲಿ ನಮೂದಿಸಿ ಪ್ರಚುರಪಡಿಸುವಂತೆ ಕೋರಿರುತ್ತಾರೆ. | ಆಕ್ಷೇಪಣೆಯನ್ನು ಪರಿಶೀಲಿಸಲಾಯಿತು.<br><br>ಮುಖ್ಯ ಆಯುಕ್ತರ ಕಛೇರಿ ಆದೇಶ ಸಂಖ್ಯೆ; ಬಿ12(1)ಪಿಆರ್/23/22–23, ದಿನಾಂಕ: 31–05–2022ರರ ಕಛೇರಿ ಆದೇಶದಂತೆ, ದಿನಾಂಕ: 01–04–1994 ರಿಂದ ಅನ್ವಯವಾಗುವಂತೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಲ್ಲಿ ಕ್ರಮಬದ್ಧಗೊಳಿಸಿ ಆದೇಶಿಸಲಾಗಿರುವುದರಿಂದ ಸದರಿಯವರನ್ನು ಸೇವಾ ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ: 675 ರಲ್ಲಿ ಸೇವಾ ಹಿರಿತನವನ್ನು ದಿನಾಂಕ:01–04–1994 ಕ್ಕೆ ನಿಗಧಿಪಡಿಸಲು ಪರಿಗಣಿಸಿ ವಿಲೇವಾರಿ ಮಾಡಲಾಯಿತು. |

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

20/12/2023 20.12.23 20/12/2023